# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

॥धर्मो रक्षति रक्षितः॥

Vol. 32 No. 4 FEBRUARY 2023 Pages 16 Rs. 2/-

























## FORTHCOMING EVENTS :

**SHRI KARKI VENKTARAMANA SHASTRI SURI AWARD PRESENTATION CEREMONY**
on 19th February 2023, Sunday | Venue : Gokul Hall, Sion. From : 10:00 am onwards

**HAVYAKA WOMEN CONVENTION** on 19th March 2023, Sunday | Venue : Mysore Association, Matunga. From : 10:30 am onwards


*PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.*

# Winners of different games held at picnic



PAGE DONATED BY : SHRI SADANANDA HEGDEKATTE MOODABIDIRE & FAMILY IN THE MEMORY OF HIS FATHER LATE V. V. HEGDEKATTE

"**Havyaka Sandesha**" is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina,
Vidyanagari P. O. Mumbai - 400 098 ✆ 2665 2591

***Hon. Editor*** : Smt. Amita S. Bhagwat

***Editorial Committee*** Smt. Shashikala Hegde, Smt. Tanuja Hegde, Shri Umesh Hegde, Shri Ganesh Bhat, Smt. Shailaja Hegde

***Publisher*** : Narayan Akadas R., Hon. Gen. Secretary

***Printed at*** : M/s. Navin Printers, Mumbai - 400 016. ✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2022-2023**

***President*** : Shivkumar P. Bhagwat
***Vice - President*** : Sanjay Bhat
***Hon. Gen. Secretary*** : Narayan Akadas
***Hon. Jt. Secretary*** : Vasant Bhat
***Hon. Treasurer*** : Gautam Upadhya

***Elected Members :***
Smt. Tanuja Hegde, G. S. Bhat, Smt. Shashikala Hegde, Vishnu Bhagwat, Ramana Bhat, Ramesh Vaidya, Umesh Hegde, Chidanand Bhagwat, Anant Bhat

***Co-opted Members :***
Chandrashekhar Joshi, G. V. Hegde

***Editorial***

# On the foundation of Humanity



*The skyline is often laced with flying kites in parts of India as the festival of Makar Sankranti spells enthusiasm and people exchange sweet with the promise of speaking sweetly.*

*Flying has always been a metaphor of ambition. However, a kite cannot fly by itself as it is controlled by someone on the ground. Birds symbolize freedom as they are not dictated by others while fluttering their wings but they have to come down in search of food. Children in the villages simply enjoy seeing flying airplanes, but passengers in the plane find relief once it lands smoothly. Not many would like to get into the depth of the sea as they would like to climb mountains. However, when the mountaineer is climbing the mountain, his feet must have the grip of the ground. It is the ground reality that affects and moulds us.*

*It is a natural instinct of a person to take care of himself. However, the world is definitely a better place to live in because of some people who think beyond their interest. They make a difference as their horizon is broad and their vision clear. The purpose of their life finds fulfilment in the happiness of others. Their persona is attractive because they have total conviction in what they are doing and never divert from their way. They are so focused towards their goal that petty things don't bother them.*

*When a person has achieved a feat, although there is a big round of applause, the sound of claps fades away with the efflux of time. However, if someone inspires others to grow, make them to realize his potentials, boosts their confidence, helps others to come out of bad habits he paves way in the hearts of the people. Like a monument, their reputation is built with long hours of hard work for many days and their personality is brightened with each passing day. It is not necessary to build their statue on the road or in the garden but we always look up to them and their stature keeps growing. Even if they are not physically present, the ideals set by them, on the foundation of humanity, stand like a tower guiding us.*

*As the Sun God has travelled from Southern hemisphere to Northern hemisphere let us be more optimistic and remember all those who have positively influenced us and shaped our value system.*

Amita S Bhagwat

e-mail : amitabhagwat@gmail.com

*PAGE DONATED BY : **HEGDE HOSPITAL, CHEMBUR**, COURTESY : **DR. DINESH HEGDE***

# ಮಾಸ ಮಹಾತ್ಮ್ಯ

✍ ಗಣಪತಿ ಭಡ್ತಿ

*(ಕಳೆದ ಸಂಚಿಕೆಯಿಂದ)*

ಈ ಉತ್ಸವವನ್ನು ಹಿಂದುಸ್ಥಾನದ ಎಲ್ಲ ವರ್ಣದವರು ಬಹು ಭಕ್ತಿಯಿಂದ ಆಚರಿಸುವರು. ಕಾರಣ ಬಹುಶಃ ಹಿಂದುಸ್ಥಾನದ ಎಲ್ಲ ಪ್ರದೇಶಗಳಲ್ಲಿ ಈ ಉತ್ಸವವು ಹೆಚ್ಚು ಕಡಿಮೆ ಪ್ರಮಾಣದಿಂದ ನಡೆಯುವುದು. ಮಥುರಾ, ವೃಂದಾವನ, ದ್ವಾರಕಾ, ಮೊದಲಾದ ಶ್ರೀಕೃಷ್ಣಚರಿತ್ರೆಯಲ್ಲಿ ಪ್ರಸಿದ್ಧವಾದ ಸ್ಥಳಗಳಲ್ಲಿ ಇದು ವಿಶೇಷ ವಿಜ್ರಂಭಣೆಯಿಂದ ನಡೆಯುವುದು. ಶ್ರೀಕೃಷ್ಣನು ಬುದ್ಧ ಕ್ರಿಸ್ತರಂತೆ ಒಂದು ವಿಶೇಷತರದ ಮತಪ್ರಚಾರಕನಾಗಿರದೆ ಅನೇಕ ಧರ್ಮಪಂಥಗಳ ಏಕವಾಕ್ಯತೆಯನ್ನು ಮಾಡಿ ಅವೆಲ್ಲವೂ ಒಬ್ಬನೇ ಪರಬ್ರಹ್ಮನ ಪ್ರಾಪ್ತಿಗೆ ಕಾರಣವಾದ ಬೇರೆ ಬೇರೆ ಮಾರ್ಗಗಳೆಂದು ತೋರಿಸಿಕೊಟ್ಟಿದ್ದಾನೆ. ಇದರಿಂದ ಶ್ರೀಕೃಷ್ಣನಿಗೆ ಜಗದ್ಗುರುವೆಂಬ ಹೆಸರು ಸಾರ್ಥಕವಾಗಿದೆ. ಶ್ರೀಕೃಷ್ಣನ ಉಪದೇಶಾಮೃತವಾದ ಭಗವದ್ಗೀತೆಯು ಹಿಂದುಗಳ ಧರ್ಮಗ್ರಂಥಗಳಲ್ಲಿ ಒಂದು ಅತ್ಯುತ್ತಮ ಗ್ರಂಥವಾಗಿದೆ. ಶ್ರೀಕೃಷ್ಣ-ಚರಿತ್ರೆಯು ಬಹು ಮನೋಹರವಾದದ್ದೆಂದೂ ಪವಿತ್ರವಾದದ್ದೆಂದೂ ಅತಿ ಪ್ರಾಚೀನ ಕಾಲದಿಂದ ತಿಳಿಯಲ್ಪಡುತ್ತದೆ. ಮಹಾಭಾರತ ಹರಿವಂಶ ಭಾಗವತ ಜೈಮಿನೀ ಅಶ್ವಮೇಧಗಳಲ್ಲಿ ಈ ಚರಿತ್ರೆಯು ವರ್ಣಿತವಾಗಿದೆ. ಇವುಗಳೊಳಗಿನ ಮುಖ್ಯ ಸಂಗತಿಗಳನ್ನು ಸಂಕ್ಷೇಪವಾಗಿ ಸಂಗ್ರಹಿಸಿದೆ.

**ಶ್ರೀಕೃಷ್ಣ ಚರಿತ್ರೆ :–** ಮಧುವೆಂಬ ದೈತ್ಯನು ವಸಾಹತು ಮಾಡಿ ಸ್ಥಾಪಿಸಿದ ರಾಜಧಾನಿಗೆ ಮಧುಪುರೀ ಅಥವಾ ಮಥುರಾ ಎಂದು ಹೆಸರಿತ್ತು. ಇದು ಯಮುನಾ ನದಿಯ ದಕ್ಷಿಣ ಭಾಗದಲ್ಲಿದ್ದು ಸುಂದರವೂ ಸಮೃದ್ಧವೂ ಆಗಿತ್ತು. ಇದಕ್ಕೆ ಕಾಲಕ್ರಮದಿಂದ ಶೂರ ಸೇನ ದೇಶವೆಂದೂ ಹೆಸರು ಬಿತ್ತು. ಇದನ್ನು ಶ್ರೀರಾಮನ ಕಾಲದಲ್ಲಿ ಶತ್ರುಘ್ನನು ವಶಮಾಡಿಕೊಂಡನು. ಇಲ್ಲಿ ಶತ್ರುಘ್ನನ ವಂಶದವರು ಕೆಲವು ಕಾಲ ಆಳಿದ ಮೇಲೆ ಯಾದವ, ಅಂಧಕ, ಭೋಜ, ಭೌಮ, ಕುಕುರ, ದಾಶಾರ್ಹ, ವೃಷ್ಣಿ ಎಂಬ ಚಂದ್ರವಂಶದ ಏಳು ಮನೆತನಗಳು ವಾಸ ಮಾಡಿದವು. ಇವರಲ್ಲಿ ಯಾದವರು ಪ್ರಮುಖರಾಗಿದ್ದರು. ಯಾದವ ವಂಶದ ವಸುದೇವನು ಭೋಜನ ಮಾಂಡಲಿಕನಾಗಿದ್ದನು. ಇವನು ಯಮುನಾ ನದಿಯ ಮತ್ತೊಂದು ದಂಡೆಯಲ್ಲಿರುವ ಗೋವರ್ಧನವೆಂಬಲ್ಲಿ ಇರುತ್ತಿದ್ದನು. ಈ ವಂಶದವರು ಕೃಷಿ, ಗೋರಕ್ಷಣದಲ್ಲಿ ತತ್ಪರರಾಗಿರುತ್ತಿದ್ದರು. ಶೂರಸೇನ ದೇಶದ ರಾಜನು ಆ ಕಾಲಕ್ಕೆ ಉಗ್ರಸೇನನೆಂಬವನಾಗಿದ್ದನು. ಇವನು ಸದಾಚಾರ ಸಂಪನ್ನನಾದ್ದರಿಂದ ಪ್ರಜೆಗಳು ಸುಖಿಗಳಾಗಿದ್ದರು. ಆದರೆ ಇವನ ಮಗನಾದ ಕಂಸನು ಬಹು ದುಷ್ಟನಾಗಿದ್ದನು. ಇವನು ತನ್ನ ತಮ್ಮಂದಿರ ಸಹಾಯದಿಂದ ತಂದೆಯನ್ನು ಸೆರೆಯಲ್ಲಿ ಹಾಕಿ ತಾನೇ ರಾಜ್ಯಭಾರ ಮಾಡಹತ್ತಿದನು. ಇವನ ತಂಗಿಯಾದ ದೇವಕಿಯು ವಸುದೇವನ ಹೆಂಡತಿಯಾಗಿದ್ದಳು. ವಸುದೇವನು ಮಾವನ (ಉಗ್ರಸೇನನ) ಪಕ್ಷವನ್ನು ವಹಿಸಿ ತನ್ನನ್ನು ಪೀಡಿಸುವನೆಂದು ಕಂಸನು ಊಹಿಸಿ ವಸುದೇವನನ್ನು ದ್ವೇಷಿಸುತ್ತಿದ್ದನು. ವಸುದೇವನ ಮಗನಿಂದಲೇ ತನಗೆ ಮರಣ ಬರುವುದೆಂಬುದನ್ನು ಆಶರೀರ ವಾಣಿಯಿಂದ ತಿಳಿದು ವಸುದೇವ ದೇವಕಿಯರನ್ನು ಕಾವಲಿನಲ್ಲಿಟ್ಟನು. ಹಾಗೂ ಹುಟ್ಟಿದ ಹುಡುಗರನ್ನು ಕೂಡಲೇ ತನ್ನ ಕೈವಶ ಮಾಡಿಕೊಂಡು ಕೊಂದು ಬಿಡುತ್ತಿದ್ದನು. ಈ ಪ್ರಕಾರ ಆರು ಮಕ್ಕಳನ್ನು ಶಿಲೆಯ ಮೇಲೆ ಅಪ್ಪಳಿಸಿ ಕೊಂದನು. ಏಳನೇ ಗರ್ಭವು ಅವಳಿಗಾದ ಕಂಸನ ಭಯದಿಂದ ಸ್ರಾವವಾಗಿ ಹೋಯಿತು. ವಸುದೇವನಿಗೆ ರೋಹಿಣಿ ಎಂಬ ಹೆಸರಿನ ಮತ್ತೊಬ್ಬ ಹೆಂಡತಿಯಿದ್ದಳು.



ಇವಳನ್ನು ಕಂಸನ ಭಯದಿಂದ ವಸುದೇವನು ತನ್ನ ಮಿತ್ರನಾದ ನಂದನ ಮನೆಯಲ್ಲಿಟ್ಟಿದ್ದನು. ದೇವಕಿಯು ಎಂಟನೇ ಗರ್ಭವನ್ನು ಹೊಂದಿದ ಕಾಲಕ್ಕೆ ರೋಹಿಣಿಯೂ ಗರ್ಭವತಿಯಾಗಿದ್ದಳು. ಈ ಗರ್ಭದಿಂದ ಹುಟ್ಟಿದ ಮಗನಿಗೆ ಸಂಕರ್ಷಣನೆಂಬ ಹೆಸರಿಟ್ಟಿದ್ದರು. ಇವನೇ ಮುಂದೆ ಬಲರಾಮನೆಂಬ ಹೆಸರಿನಿಂದ ಪ್ರಸಿದ್ಧನಾದನು. ಕಂಸನು ದೇವಕಿಯ ಈಗಿನ ಗರ್ಭದಿಂದಲೇ ತನಗೆ ಮರಣಭಯವಿರುವುದೆಂಬದನ್ನು ನಾರದರಿಂದ ತಿಳಿದು ವಸುದೇವ-ದೇವಕಿಯರನ್ನು ಬಲವಾದ ಕಾವಲಿನಲ್ಲಿಟ್ಟನು. ಆದರೆ ದೇವಕಿಯು ಅಕಲ್ಪಿತವಾಗಿ ಎಂಟನೇ ತಿಂಗಳಲ್ಲೇ ಗಂಡು ಶಿಶುವನ್ನು ಹೆತ್ತಳು. ಈ ಕಾಲವೇ ಶ್ರಾವಣ ಮಾಸ ಕೃಷ್ಣ ಪಕ್ಷದ ಅಷ್ಟಮಿಯ ಮಧ್ಯರಾತ್ರೆಯಾಗಿತ್ತು. ಕಂಸನೂ ಕಾವಲುಗಾರರೂ ಗಾಢನಿದ್ರೆಯಲ್ಲಿದ್ದುದರಿಂದ ಈ ಸಂಧಿಯನ್ನು ಸಾಧಿಸಿ ಈ ಶಿಶುವನ್ನು ಹ್ಯಾಗಾದರೂ ಮಾಡಿ ಸಂರಕ್ಷಿಸಬೇಕೆಂದು, ವಸುದೇವನು ಆ ಶಿಶು ಸಹಿತ ಮನೆಯಿಂದ ಹೊರ ಹೊರಟು ಯಮುನಾ ನದಿಯನ್ನು ದಾಟಿ ನಂದನ ಮನೆಗೆ ಬಂದನು. ದೈವವಶದಿಂದ ನಂದನ ಹೆಂಡತಿಯಾದ ಯಶೋದೆಯು ಅದೇ ಕಾಲಕ್ಕೆ ಕನ್ಯೆಯನ್ನು ಹಡೆದಿದ್ದಳು. ವಸುದೇವನು ತಾನು ಒಯ್ದ ಗಂಡು ಶಿಶುವನ್ನು ಯಶೋದೆಯ ಬಳಿಯಲ್ಲಿಟ್ಟು ನಂದನ ಮಗಳಾದ ಹೆಣ್ಣು ಶಿಶುವನ್ನು ತಕ್ಕೊಂಡು ಬಂದು ದೇವಕಿಯ ಬಳಿಯಲ್ಲಿಟ್ಟನು. ಮರುದಿನ ಬೆಳಿಗ್ಗೆ ಕಂಸನು ದೇವಕಿಯ ಸೂತಿಕಾಗೃಹವನ್ನು ಹೊಕ್ಕು ಅಲ್ಲಿರುವ ಹೆಣ್ಣು ಶಿಶುವನ್ನು ತಂದು ಶಿಲೆಗೆ ಅಪ್ಪಳಿಸಿದನು. ಆ ಕಾಲಕ್ಕೆ ಆ ಶಿಶುವಿನಿಂದ ಒಂದು ದಿವ್ಯ ತೇಜಸ್ಸು ಹೊರಟು-'ನಿನ್ನನ್ನು ನಾಶ ಮಾಡುವ ದಿವ್ಯ ಪುರುಷನು ಭೂಮಿಯಲ್ಲಿ ಅವತರಿಸಿರುವನು.' ಎಂದು ಹೇಳಿ ಹೋಯಿತು. ಈ ತೇಜಸ್ಸು 'ದೇವೀ' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಕಂಸನು ಈ ಪ್ರಕಾರ ಪ್ರಯತ್ನಪಟ್ಟರೂ ತನ್ನ ಮನೋರಥವು ಸಫಲವಾಗದ್ದಕ್ಕೆ ಅಸಮಾಧಾನಪಟ್ಟು ವಸುದೇವ ದೇವಕಿಯರನ್ನು ಬಂಧಮುಕ್ತ ಮಾಡಿದನು.

ಇತ್ತ ನಂದನ ಮನೆಯಲ್ಲಿ ಪುತ್ರ ಜನ್ಮವಾದದ್ದನ್ನು ಕಂಡು ಎಲ್ಲರಿಗೂ ಆನಂದವಾಯಿತು. ಆ ಶಿಶುವಿಗೆ ಕೃಷ್ಣನೆಂದು ಹೆಸರಿಟ್ಟರು. ಕೃಷ್ಣನು ಚಪಲನೂ ಸುಂದರನೂ ಇದ್ದನು. ಇದರಿಂದ ಅವನು ಎಲ್ಲರಿಗೂ ಪ್ರಿಯನಾಗಿದ್ದನು. ಕಂಸನು ತನ್ನ ನಾಶಕ್ಕೆ ಕಾರಣನಾದ ಬಾಲಕನನ್ನು ಶೋಧಿಸಿ ಕೊಲ್ಲುವದಕ್ಕಾಗಿ ಪೂತನಿ ಮೊದಲಾದ ಕೆಲವು ದುಷ್ಟರನ್ನು ಕಳುಹಿದನೆಂದೂ ಅವರೆಲ್ಲರೂ ಕೃಷ್ಣನಿಂದ ಹತರಾದರೆಂದೂ ವರ್ಣನೆಯಿರುತ್ತದೆ.

ರಾಮ, ಕೃಷ್ಣರು ಆಟಗೋಷ್ಠಿಗಳಲ್ಲಿ ಕೂಡಿಯೇ ಇರುತ್ತಿದ್ದರು. ಇವರು ಏಳೆಂಟು ವರ್ಷದವರಾದ ಮೇಲೆ ನಂದನು ಈ ಹುಡುಗರನ್ನು ಆಗಿನ ಪದ್ಧತಿಯಂತೆ ದನಗಾವಲಿಗೆ ಕಳುಹಿಸಹತ್ತಿದನು. ಕೃಷ್ಣನು ತನ್ನ ಚಾಪಲ್ಯದಿಂದ ಇಂಥ ದನ ಕಾಯುವ ಹುಡುಗರಿಗೆ ನಾಯಕನಾದನು. ಗೋಕುಲದೊಳಗಿನ ಈ ಹುಡುಗರೆಲ್ಲರೂ ಕೂಡಿ ಆಡುತ್ತಿದ್ದರು. ನಂದ ಮೊದಲಾದ ಗೋಕುಲವಾಸಿಗಳು ಈ ಗೋಕುಲಕ್ಕಿಂತಲೂ ತೃಣ-ಜಲಗಳಿಂದ ಸಮೃದ್ಧವಾದ ವೃಂದಾವನವೆಂಬ ಒಂದು ವನದ ಸಮೀಪ ವ್ರಜವೆಂಬಲ್ಲಿಗೆ ಹೋಗಿ ವಸಾಹತು ಮಾಡಿದರು.

*(ಮುಂದುವರಿಯುವುದು)*

*PAGE DONATED BY : **SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR***

# ಕಾಳಿದಾಸನನ್ನು ಕನ್ನಡಕ್ಕಿಳಿಸಿದ ಕನ್ನಡ ಕಣ್ಮಣಿಗಳು

✍ ಶೈಲಜಾ ಹೆಗಡೆ, ಮುಂಬಯಿ

*(ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)*

ಯಕ್ಷ-ಯಕ್ಷಿ ಗೀತ ರೂಪಕ-ಅಂಬಿಕಾತನಯದತ್ತ : ಕಾಳಿದಾಸನ ಮೇಘದೂತ ಕಾವ್ಯದ 'ಅಂಬಿಕಾತನಯದತ್ತರ ಮೇಘದೂತ' ಎಂಬ ಕನ್ನಡಾನುವಾದದಂತೆಯೇ, ಕವಿ ದ.ರಾ. ಬೇಂದ್ರೆಯವರ 'ಯಕ್ಷ-ಯಕ್ಷಿ' ಗೀತ ರೂಪಕವೂ ಖ್ಯಾತಿಯನ್ನು ಗಳಿಸಿದೆ. ಸಿಡಿಲು ಗುಡುಗಿನ ಆರ್ಭಟೆಯಿಂದ ದೃಶ್ಯ ಪ್ರಾರಂಭವಾಗುತ್ತದೆ. ಕುಬೇರನ ಘರ್ಜನೆಯ ನುಡಿ,

ಕುಬೇರ ; ಮರಣಶೀಲರಲಿ ಹೋಗು, ಬದುಕು-<br>
ನಾ ನೋಡುವೆ ಬಾಳಲಾ !<br>
ವರುಷ ಕಳೆದು-ನೀ ಬಂದರುಳಿದು<br>
ನಾ ನೋಡುವೆ ಆ ಬಾಳಲಾ !

ಅಗ್ನಿದಿವ್ಯದ ಕರ್ಮ ದೇವಯೋನಿಗಳನ್ನೂ ಬಿಡದು. ಕರ್ತವ್ಯಚ್ಯುತನಾದ ಯಕ್ಷನಿಗೆ ಯಕ್ಷರಾಜ ಕುಬೇರ ವಿಧಿಸುವ ಶಿಕ್ಷೆ ಮರಣಶೀಲರೊಡನೆ ಬದುಕುವುದು. ದೇವಯೋನಿಗಳಿಗೆ ಇದೊಂದು ಉಗ್ರಶಿಕ್ಷೆಯಾಗಿ ಪರಿಣಮಿಸುತ್ತದೆ. ಪ್ರಣಯಿ ಪ್ರತ್ಯಕ್ಷ ಸಾಕ್ಷೀ ಪುರುಷನಾದ ಯಕ್ಷ ಯಃಕಶ್ಚಿತನಲ್ಲ. ಅವನೊಬ್ಬ ಜಗಜ್ಜೀವನನೆಂದು ಬೇಂದ್ರೆಯವರು ನುಡಿಯುತ್ತಾರೆ.

ವೃಂದಗೀತ ಮತ್ತು ಸಹೃದಯರ ನುಡಿಗಳ ಮೂಲಕ ಬೇಂದ್ರೆಯವರು ಕಾಳಿದಾಸನ ಮೇಘದೂತ ಕಾವ್ಯದ ಒಳ ಹೂರಣವನ್ನು ಹೊರಗೆಡಹಲು ಪ್ರಯತ್ನಿಸಿದ್ದಾರೆ. ಶಿವ ಪಾರ್ವತಿಯರ ಮತ್ತು ರಾಮ ಸೀತೆಯರ ವಿರಹವನ್ನು ಪ್ರಸ್ತಾಪಿಸಿ, ಅವರ ಆದರ್ಶ ಪ್ರೇಮವನ್ನು ಬೋಧಿಸುವ ಸನ್ನಿವೇಶಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಮೇಘದೂತ ಕಾವ್ಯದ ವಿಶೇಷತೆಯನ್ನು ಈ ರೀತಿಯಲ್ಲಿ ವಿವರಿಸಲಾಗಿದೆ. 'ಕಾರ್ತೀಕ ಶುದ್ಧ ಏಕಾದಶಿಗೆ ಉತ್ಥಾನ ಏಕಾದಶಿ ಬೋಧಿನೀ ಏಕಾದಶಿ ಎಂಬ ಹೆಸರುಗಳು ಪ್ರಚಾರದಲ್ಲಿವೆ. ದೇವರು ಅಂದು ಏಳುತ್ತಾನೆ. ತುಳಸಿಯ ಕೂಡ ಅವನ ವಿವಾಹವಾಗುತ್ತದೆ. ಕರಿಯ ತುಳಸಿಗೆ ಕುಬೇರಕ ಎನ್ನುತ್ತಾರೆ ಎಂಬುದು ಲಕ್ಷಿಸುವಂತ ವಿಷಯ. ಭಾಗವತ ಸಂಪ್ರದಾಯದವರು ಆಷಾಢ ಕಾರ್ತೀಕಕ್ಕೆ ಪಂಢರಪುರಕ್ಕೆ ವಾರಿ ಹೋಗುತ್ತಾರೆ. ಇಂಥ ಹಿಂದೂ ವ್ರತಕತೆಯನ್ನು ಜಗದ್ವಿಖ್ಯಾತವಾಗುವಂತೆ ಕಾವ್ಯವಾಗಿ ಮಾರ್ಪಡಿಸಿದ್ದು ಕಾಳಿದಾಸನ ಕಾವ್ಯಪ್ರತಿಭೆಗೆ ಭೂಷಣವೆಂದೇ ಹೇಳಬಹುದು. ಕಾರ್ತೀಕದೊಳಗಿನ 'ಧರಣಿವ್ರತ'ವನ್ನು ಶಕುಂತಲೆ ಕೂಡ ಆಚರಿಸಿದ್ದಳು ಎಂದು ವರಾಹ ಪುರಾಣವು ಹೇಳುತ್ತದೆ. ಇದು ಯೋಗೇಶ್ವರ ದ್ವಾದಶಿ ವ್ರತವು ಯಕ್ಷನ ವಿಯೋಗ ಶಾಪ ಹೋಗಿ ಯಕ್ಷ ಯಕ್ಷಿ ಮಿಲನದ ಯೋಗ ತರುತ್ತದೆ' ಎಂದು ಅಂಬಿಕಾತನಯದತ್ತರು ಹಿಂದೂ ವ್ರತಕತೆಗೂ ಮೇಘದೂತ ಕಾವ್ಯಕ್ಕೂ ಇರುವ ನಿಕಟವಾದ ಸಂಬಂಧವನ್ನು ತಿಳಿಸಿಕೊಟ್ಟಿದ್ದಾರೆ.

ಕಬ್ಬಿಣಕೆ ಒರೆ ಬೇಕೆ, ಬಂಗಾ-<br>
ರವನು ತಿಕ್ಕುವುದೇ ಕ್ರಮ<br>
ಪ್ರೀತಿಗೋ ವಿರಹಾಗ್ನಿ-ದಿವ್ಯವ<br>
ಹಾಯುವುದೇ ಪ್ರಥಮಾಶ್ರಮ<br>
ಬಂದಿತು ಶರತ್ಕಾಲ-'ನಂದಾಮ ಶರದಃ ಶತಮ್'



ಪ್ರೀತಿಯು ಅಪರಂಜಿಯಾಗಬೇಕಾದರೆ, ವಿರಹಾಗ್ನಿ ದಿವ್ಯವನ್ನು ಹಾಯಲೇಬೇಕು. ಪ್ರೀತಿ ಬಂಗಾರಕ್ಕೆ ಸಮನಾದುದು. ಬಂಗಾರವನ್ನು ಮಾತ್ರ ಒರೆಗೆ ಹಚ್ಚುತ್ತಾರೆ. ಕಬ್ಬಿಣಕ್ಕೆ ಒರೆಯು ಅಗತ್ಯವಿಲ್ಲವೆಂದು ಕವಿಯು ಪ್ರೀತಿಯ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ. ಕೊನೆಯಲ್ಲಿ ಭರತ ವಾಕ್ಯವಿರುವುದು ಈ ಗೀತ ರೂಪಕದ ಇನ್ನೊಂದು ವೈಶಿಷ್ಟ್ಯವಾಗಿದೆ.

ಪ್ರೇಮವೆ ಯಕ್ಷ ಸಮರಸ ಲಕ್ಷ್ಯ<br>
ಯಕ್ಷಿಯು ಸಾಕ್ಷಿಯ ಗುಣ<br>
ಕಣಕಣದಲಿ ಕುದಿವುದು ರಸಪಾಕ<br>
ರಸಮುಖ ಜೀವಕ್ಷಣ

ಪ್ರೇಮವೇ ಸಮರಸವಾಗಿ ಜೀವಕ್ಷಣವು ರಸಪಾಕವಾಗಬೇಕೆಂಬುದು ಕವಿಯ ಹಂಬಲ. ಈ ಗೀತ ರೂಪಕದ ಚಿಂತನ ಹಾಗೂ ಮಂಥನವು ಇಂದಿನ ಯುವ ಪೀಳಿಗೆಗೆ ಬಾಳುವ ಧೈರ್ಯ ಕೊಡುತ್ತದೆ ಎಂಬ ದೃಷ್ಟಿಯಿಂದ ಧಾರವಾಡ ಆಕಾಶವಾಣಿ ಯುವವಾಣಿ ಕಾರ್ಯಕ್ರಮದಲ್ಲಿ ಅನೇಕ ಸಲ ಬಿತ್ತರಗೊಂಡಿರುವುದು, ಈ ಗೀತ ರೂಪಕದ ಹಿರಿಮೆಯನ್ನು ದರ್ಶಿಸುತ್ತದೆ.

*(ಮುಂದುವರಿಯುವುದು)*

UIL

UGRU INDUSTRIES

*With Best Compliments from*

**UGRU INDUSTRIES**

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*

*PAGE DONATED BY :* ***SHRI N. R. HEGDE, DOMBIVLI***

# ತಾತಿ ಹೇಳಿದ ಕಥೆಗಳು

✍ ಶಶಿಕಲಾ ಹೆಗಡೆ, ಮುಂಬಯಿ



ಕೃತಿ : ತಾತಿ ಹೇಳಿದ ಕಥೆಗಳು
ಲೇಖಕರು : ವಿದುಷಿ ಸರೋಜಾ ಶ್ರೀನಾಥ್
ಪುಟಗಳು : 92
ಬೆಲೆ : ರೂ. 200/-

ಸಾಂಸ್ಕೃತಿಕ ನಗರಿ ಮೈಸೂರಿನ ಸುಸಂಸ್ಕೃತ ಕುಟುಂಬವೊಂದರಲ್ಲಿ ಜನಿಸಿದ ಸರೋಜಾ ಶ್ರೀನಾಥ್ ಅವರು ಉತ್ತಮ ಸಂಸ್ಕಾರದೊಂದಿಗೆ ಬೆಳೆದವರು. ಲಲಿತ ಕಲೆಗಳಲ್ಲಿ ಇವರಿಗೆ ಅಪರಿಮಿತ ಆಸಕ್ತಿ, ಶ್ರದ್ಧೆ. ಅದರ ಪರಿಣಾಮವಾಗಿಯೇ ಇವರು ನೃತ್ಯದ ಲಾಸ್ಯ, ಸಂಗೀತದ ಲಾಲಿತ್ಯ ಜೊತೆಗೆ ಸಾಹಿತ್ಯದ ಅಪೂರ್ವ ಸಂಗಮ. ನೃತ್ಯ, ಸಂಗೀತವನ್ನು ವೃತ್ತಿಯನ್ನಾಗಿಸಿ ಕೊಂಡು ಸಾಹಿತ್ಯವನ್ನು ಪ್ರವೃತ್ತಿಯನ್ನಾಗಿ ಆಯ್ಕೆ ಮಾಡಿಕೊಂಡ ಇವರು ವೃತ್ತಿ, ಪ್ರವೃತ್ತಿಗಳಿಗೆ ಸಮಾನ ಪ್ರಾಶಸ್ತ್ಯವನ್ನು ನೀಡಿದವರು. ವಿವಾಹದ ಬಳಿಕ ಮುಂಬಯಿಗೆ ಬರುವಾಗ ಶ್ರೀಗಂಧದ ನಾಡಿನಿಂದ ಕನ್ನಡದ ಕಂಪನ್ನು ತಮ್ಮೊಡನೆ ಹೊತ್ತು ತಂದರು. ಮುಂಬಯಿ ವಿಶ್ವವಿದ್ಯಾಲಯದ ನಲಂದ ನೃತ್ಯಕಲಾ ವಿಭಾಗದ ಮುಖ್ಯಸ್ಥೆಯಾಗಿ ಸೇವೆ ಸಲ್ಲಿಸಿದ ಇವರು ವೃತ್ತಿಯಿಂದ ನಿವೃತ್ತಿಯನ್ನು ಪಡೆದಿದ್ದಾರೆ. ಆಸಕ್ತಿ, ಅಭಿರುಚಿಯ ಕ್ಷೇತ್ರದಲ್ಲಿ ಅವಿಶ್ರಾಂತವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. 88ರ ಹರೆಯದ ಇವರ ಕ್ರಿಯಾಶೀಲ ವ್ಯಕ್ತಿತ್ವ ಹಾಗೂ ಬತ್ತದ ಉತ್ಸಾಹದ ಫಲವೇ "ತಾತಿ ಹೇಳಿದ ಕತೆಗಳು" ಎನ್ನುವ ಈ ಕಥಾ ಸಂಕಲನ.

ಕಥಾ ಸಂಕಲನದ ಶೀರ್ಷಿಕೆಯೇ ಓದುಗರ ಗಮನ ಸೆಳೆಯುತ್ತದೆ. ಅಜ್ಜನ ಹೆಂಡತಿ ಅಜ್ಜಿಯಾದರೆ, ತಾತನ ಮಡದಿ 'ತಾತಿ' ಆಗುತ್ತಾಳೆ ಎಂದು ಲೇಖಕಿ ನೀಡುವ ಸ್ಪಷ್ಟನೆ ಒಪ್ಪುವಂತಹದ್ದು. ಇಲ್ಲಿ ಬರುವ ತಾತಿ ಮಾಡರ್ನ್ ಅಜ್ಜಿ. ದೇಶ, ವಿದೇಶಗಳಲ್ಲಿ ಸಂಚರಿಸುವ ಸಮಯದಲ್ಲೂ ಅಂತರ್ಜಾಲದ ಮೂಲಕ ಕಥಾ ಶಿಬಿರವನ್ನು ಮುನ್ನಡೆಸುವವಳು. ತಾತಿಯ ಪಾತ್ರದೊಳಗೆ ಸರೋಜಾ ಶ್ರೀನಾಥ್ ಅವರು ಪರಕಾಯ ಪ್ರವೇಶ ಮಾಡಿ ತಾವೇ ಪುಟ್ಟ ಮಕ್ಕಳೆದುರು ಕತೆಗಳನ್ನು ಹೇಳುತ್ತಿರುವಂತೆ ಭಾಸವಾಗುತ್ತದೆ.

'ವಿಷಯ ಯಾವುದೇ ಆಗಿದ್ದರೂ ಅದನ್ನು ಸಜೀವಗೊಳಿಸಿ ಒಂದು ಕೃತಿಯಾಗಿ ನಿರೂಪಿಸುವುದೇ ಕಥೆಯಾಗುವುದು' ಎನ್ನುವ ಕತೆಗಾರ್ತಿಯ ಮಾತುಗಳು ಸಮರ್ಥನೀಯ. ಪ್ರಕೃತಿಯಲ್ಲಿರುವ ಎಲ್ಲ ಅಂಶಗಳು ಇಲ್ಲಿ ಪಾತ್ರಧಾರಿಗಳಾಗುತ್ತವೆ. ಪಶುಪಕ್ಷಿಗಳಿಗೆಲ್ಲ ಕಲ್ಪನೆಯ ಕೋಡು, ರೆಕ್ಕೆಗಳು ಮೂಡಿ ಜಿಗಿಯುತ್ತವೆ; ಹಾರಾಡುತ್ತವೆ; ಮಾತನಾಡುತ್ತವೆ. ಅಲ್ಲದೆ ಮಾನವೀಯತೆಯ ಮೂರ್ತಿಗಳಾಗಿ ಮನುಷ್ಯನ ಆಪದ್ಬಾಂಧವರಾಗಿ ಸಹಾಯ ಮಾಡುತ್ತವೆ.

ಕೂಡು ಕುಟುಂಬಗಳು ಕಾಣೆಯಾಗುತ್ತಿರುವ ಇಂದಿನ ದಿನಗಳಲ್ಲಿ ಮಕ್ಕಳೆದುರು ಅದರ ಸುಂದರ ಚಿತ್ರಣವನ್ನು ಲೇಖಕಿ ನೀಡಿದ್ದಾರೆ. ಅಕ್ಕಪಕ್ಕದ ಮನೆಗಳ ಮಕ್ಕಳು ಕೂಡ ಕಥಾಶಿಬಿರದಲ್ಲಿ ಪಾಲ್ಗೊಳ್ಳುತ್ತಾರೆ. ಈ ಸಂಕಲನದಲ್ಲಿರುವ ಕತೆಗಳಲ್ಲಿ ಹೆಚ್ಚಿನವು ಒಂದು ಪುಟದಲ್ಲಿ ಮುಗಿಯುವಷ್ಟು ಚಿಕ್ಕವು. ಆದರೆ ಅವುಗಳಲ್ಲಿ ಜೀವನವನ್ನು ರೂಪಿಸಿಕೊಳ್ಳಲು ಮಾರ್ಗದರ್ಶನ ನೀಡುವಂತಹ ನೀತಿಗಳು ಅಡಕವಾಗಿವೆ. ಮಾತು ಮಿತವಾಗಿರಲಿ ಎನ್ನುವ ಆಮೆಯ ಕತೆ, ನಾವು ಮಾಡಿದ ಕರ್ಮ ನಮಗೇ ತಿರುಗಿ ಬರುವುದು ಎಂಬ ನೀತಿ ಮಾತು ಹೇಳುವ ಬಿಳಿಯಾನೆಯ ಕತೆ, ಹೊಗಳಿಕೆಗೆ ಮರುಳಾಗದಿರಿ ಎಂಬ ಕಿವಿ ಮಾತನ್ನು ಉಸುರುವ ನರಿ ಮತ್ತು ಕಾಗೆಯ ಕತೆ, ದುಷ್ಟರಿಂದ ದೂರವಿರಿ, ವಿದ್ಯೆಯು ಸಂಕಷ್ಟದ ಕಾಲದಲ್ಲಿ ನಮ್ಮ ನೆರವಿಗೆ ಬರುವುದು ಹೀಗೆ ಇಲ್ಲಿ ಬರುವ ಕತೆಗಳೆಲ್ಲ ನೀತಿವತ್ತಾಗಿವೆ. ಕತೆಗಳನ್ನು ಹೇಳಿ ಮಕ್ಕಳಿಗೆ ಮನರಂಜನೆ ನೀಡುವ ತಾತಿ ಮಕ್ಕಳನ್ನು ಕತೆ ಹೇಳುವಂತೆ ಪ್ರೋತ್ಸಾಹಿಸುವ, ಹುರಿದುಂಬಿಸುವ ಪ್ರೋತ್ಸಾಹದ ಪ್ರೇರಣಾ ಶಕ್ತಿಯಾಗಿದ್ದಾಳೆ. ಮಕ್ಕಳಲ್ಲಿ ಅಡಗಿರುವ ಕ್ರಿಯಾಶೀಲತೆ ಹೊರಬರಲಿ ಎನ್ನುವ ಉದ್ದೇಶ ಇಲ್ಲಿದೆ.

ಕನ್ನಡ ಭಾಷೆಯಲ್ಲಿ ಪರಿಣತಿಯನ್ನು ಹೊಂದಿರುವ ಸರೋಜಾ ಶ್ರೀನಾಥ್ ಅವರು ಮರಾಠಿ, ಸಂಸ್ಕೃತ, ಹಿಂದಿ, ಇಂಗ್ಲಿಷ್ ಹಾಗೂ ತಮಿಳು ಭಾಷೆಗಳಲ್ಲಿ ಕೂಡ ಪ್ರಾವೀಣ್ಯತೆಯನ್ನು ಪಡೆದಿದ್ದಾರೆ. ಈ ಎಲ್ಲ ಭಾಷೆಗಳ ಸಾಹಿತ್ಯವನ್ನು ಓದಿ ಅವುಗಳಲ್ಲಿರುವ ಜ್ಞಾನವನ್ನು ಮನನ ಮಾಡಿಕೊಂಡಿದ್ದಾರೆ. ಹಲವಾರು ದೇಶಗಳನ್ನು ಸುತ್ತಾಡಿದ ಲೇಖಕಿ ತಾವು ಹೋದೆಡೆಯಲ್ಲೆಲ್ಲ ಸ್ಥಳೀಯ ಕಥಾಲೋಕದೊಳಗೆ ಇಣುಕಿ ನೋಡಿದ್ದಾರೆ. ಬೇರೆ ಬೇರೆ ದೇಶಗಳ ಜಾನಪದ ಕತೆಗಳನ್ನು ಓದುಗರಿಗೆ ಪರಿಚಯಿಸಿದ್ದಾರೆ. ಜಪಾನೀ ಕತೆಗಳು, ವಿಯೆಟ್ನಾಂ, ಸಿಂಗಾಪುರ, ಮಯನ್ಮಾರ್ ಹೀಗೆ ಹೊರ ದೇಶದ ಕತೆಗಳ ಸ್ವಾದ ಇಲ್ಲಿ ಸವಿಯಲು ದೊರಕುತ್ತದೆ.

ದೀರ್ಘ ಕರ್ಣ ಎಂಬ ಬೆಕ್ಕು, ಚಿತ್ರಕರ್ಣ ಎಂಬ ಒಂಟೆ, ಘಂಟಕರ್ಣ ಎಂಬ ರಕ್ಕಸ, ಮದೋತ್ಕಟ ಎಂಬ ಸಿಂಹ ಹೀಗೆ ಕತೆಗಳಲ್ಲಿ ಬರುವ ಪಾತ್ರಗಳ ಹೆಸರು ಕೂಡ ವಿಶೇಷವಾಗಿದೆ. ಮನುಷ್ಯರಂತೆ ಮಾತನಾಡುವ ಪ್ರಾಣಿ, ಪಕ್ಷಿಗಳು, ಮಾಂತ್ರಿಕ ಶಕ್ತಿಯನ್ನು ಹೊಂದಿರುವ ಕುಂಚ, ಕೋಲು, ಮಾಣಿಕ್ಯ ಹೀಗೆ ಕಾಲ್ಪನಿಕ ಕತೆಗಳು ಇಲ್ಲಿ ಹೇರಳವಾಗಿವೆ. ಕಾಳಿಯ ಮರ್ದನ ಮಾಡುವ ಕೃಷ್ಣ, ಗೆಳೆತನಕ್ಕೆ ಮಾದರಿಯಾದ ಸುದಾಮ ಮತ್ತು ಕೃಷ್ಣ, ರಾಮಾಯಣ ರಚಿಸಿದ ವಾಲ್ಮೀಕಿ ಮೊದಲಾದ ಪೌರಾಣಿಕ ಕತೆಗಳು ಸಂಕಲನದಲ್ಲಿವೆ. ಮಾನವೀಯತೆಯನ್ನು ತೋರಿದ ಶಿವಾಜಿ ಮಹಾರಾಜ, ಕುಶಾಗ್ರನೀತಿಯ ಚಾಣಕ್ಯ ಮುಂತಾದ ಐತಿಹಾಸಿಕ ಕತೆಗಳಿವೆ. ಸತ್ಯವೇ ನಮ್ಮ ತಾಯಿ ತಂದೆ ಎಂದು ನುಡಿದಂತೆ ನಡೆದ ಪುಣ್ಯಕೋಟಿ ಗೋವಿನ ಕತೆ, ಮಕ್ಕಳಿಗೆ ಅತ್ಯಂತ ಪ್ರಿಯವಾಗುವ ಆಲಿಬಾಬಾ ಮತ್ತು ನಲವತ್ತು ಕಳ್ಳರು ಕತೆ ಇಲ್ಲಿ ದಾಖಲಾಗಿವೆ. ಕನಸನ್ನು ಕಾಣುತ್ತ ಸೋಮಾರಿಯಾಗಬೇಡಿ ಎಂಬ ನೀತಿ ಹೇಳುವ ತಿರುಕನ ಕತೆ, ತಾಳ್ಮೆ, ಸಂಯಮದ ಪಾಠವನ್ನು ವಿನೋದಮಯವಾಗಿ ಕಲಿಸುವ ಮಂಗಗಳ ಉಪವಾಸದ ಕತೆ ಹೀಗೆ ಎಲ್ಲ ಪ್ರಕಾರಗಳ ಸುಂದರ ಗುಚ್ಛ ಈ ಕಥಾ ಸಂಕಲನವಾಗಿದೆ.

ಧ್ವನಿಯ ಏರಿಳಿತಗಳಿಂದ ಹಾಗೂ ವ್ಯಕ್ತಪಡಿಸುವ ಹಾವಭಾವಗಳಿಂದ ನಾಯಿಯ ಭಾವನೆಗಳನ್ನು ಅರಿಯಬಲ್ಲ ರೀತಿಯನ್ನು ತಿಳಿಸುವ ಮಾಹಿತಿಗಳು, ಕುತೂಹಲಕಾರಿಯಾಗಿವೆ. ಸಾಕು ಪ್ರಾಣಿಗಳ ಕುರಿತಾದ ವಿಷಯ ಸಂಗ್ರಹಣೆಗಳ ಕಣಜವೇ ಇದಾಗಿದೆ. ಪ್ರಾಣಿಗಳು ಮತ್ತು ಪಕ್ಷಿಗಳು ನಿರ್ವಹಿಸುವ ಸಾಹಸ ಕಾರ್ಯಗಳನ್ನು ಗಮನಿಸಿ ಅವುಗಳಿಗೆ ನೀಡುವ ಗೌರವ, ಸನ್ಮಾನದ ವಿವರಗಳನ್ನು ಇಲ್ಲಿ ಕಾಣಬಹುದಾಗಿದೆ. ಇವುಗಳ ಬಗೆಗಿನ ಅಪೂರ್ವವಾದ ಮಾಹಿತಿಗಳನ್ನು ಸಂಗ್ರಹಿಸಿ ಮಕ್ಕಳಿಗೆ ಮನನವಾಗುವ ರೀತಿಯಲ್ಲಿ ನಿರೂಪಿಸಿದ್ದಾರೆ ಲೇಖಕಿ. ಪ್ರಾಣಿಗಳು ಕೇವಲ

PAGE DONATED BY : **AKADAS & FAMILY**

# PICNIC REPORT

"Alone we can do so little;together we can do so much." With this theme of unity a picnic can refresh your mind, and if you go on a picnic with your own havyaka community members then it comes with more joy and fun. The fun began right from the morning when members boarded the bus and tongue twister game in the bus made the journey look smaller and such was the excitement that the finalist had to be shortlisted at the venue. The venue was Bhat Farm, Uttan belonging to our member Mr. K. S. Bhat.

Programme began with few talents within our havyaka members like Mrs. Kala Bhagwat inaugurating the event with namana and we also had junior artist Chirag Bhat singing a nice song. The president, Shivkumar Bhagwat welcomed the members. Our picnic host Mr. Vishnu Bhagwat had some new ideas to make this event more memorable by asking everyone to introduce himself to 10 new people, whom they have not met. It was a perfect example of our picnic theme "unity". Then began a series of exciting games where all the members were divided into groups as per their age and each one got an opportunity to participate in a games according to respective age group.

Mr. G. V. Hegde and Mr. Vasant Bhat made children Aged between 8 to 16, to work on their concentration skill by picking up the baby chickpeas in straw and place it on the other side. We had healthy competition and cute group of children below 8 years were enjoying and keeping themselves busy in handling cups.

In 17 to 40 and 41 to 60 age category Mr. Nagraj Bhat / Mr. Gautam Upadhya / Mrs. Shashikala Hegde tried to test the lung powers of members by asking them to blow the balloon and dropping cup from the table and we even had a champion who could blow 8 cups down the table.

Further, one of the exciting game of the event was, where members were asked to flip the half-filled bottle and challenging them to make it stand straight, and that too in a minute. We had so much talented participants who could flip and make the bottle stand straight but we had to choose top 4. How can we forget the musical chair? So much was the fun that entire ground was occupied and we had to make huge circle of chairs and finally we had 4 winners. Senior citizens showcased their skill like teenagers when they were asked to pick the bud by fork and each and every participant thoroughly enjoyed.

Show stoper for the event was the couple game where it was tried to test who was a good listener of his wife. All the respective wives were given set of words who has to communicate it right to their husband in middle of complete chaos. It was interesting to watch that many couple could guess the question and answer properly. Post lunch the ladies wing organised Haldi-Kumkum. Haldi kumkum gifts were sponsored by Mrs. Vimala Bhat and Yelunnde by Mrs. Savitri Shastri. Fun did not stop here and real excitement of the afternoon was members trying their luck in housie game. There were many lucky people who completed 1st row, 2nd row and 3rd row, 1st line, 2nd line and 3rd line and finally we had 2 full housie winners.

The picnic was not over until every one was tired of talking about the food. Mr. Praveen Rao and his team put in their heart out to serve tasty food right from break fast where members had choice from idli, vada, upma and pineapple sheera. There was also hot tea and coffee followed by lunch which was a typical havayka food and amazing mavinakai tambli (samrani), tasty kairasa, chitranna,carrot kheer, Jilebi, ambode, chinese counter etc. The show stealer was live jilebi counter and post lunch, all the members were finally served "Kavala".

All the competition winners were felicitated by a small token of appreciation and all the volunteers who supported organizing this memorable event were also felicitated. The memorable day ended with everyone relishing the tasty vada pav and reaching home safely. All the members shared and exciting feedback. The picnic was really a memorable one.

**Report by Gautam Upadhya**

---

ಶೌರ್ಯ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗಿರದೆ ಅವುಗಳು ಮಾನವನ ಮಾನಸಿಕ ಒತ್ತಡವನ್ನು ನೀಗಿಸುವಲ್ಲಿ, ಯೋಧರಿಗೆ ಯುದ್ಧದ ಸಮಯದಲ್ಲಿ ಧೈರ್ಯ, ನೆಮ್ಮದಿಯನ್ನು ತುಂಬುವುದರಲ್ಲಿ ಕೂಡ ಸಹಕಾರಿ ಎನ್ನುವ ವಿಶೇಷ ಸಂಗತಿಯನ್ನು ಕೂಡ ಸರೋಜಾ ಶ್ರೀನಾಥ್ ಅವರು ಹೇಳುತ್ತಾರೆ. ನಿಷ್ಠೆಯಿಂದ ಕಾರ್ಯ ನಿರ್ವಹಿಸಿ ತಮ್ಮ ಜೀವವನ್ನು ಬಲಿದಾನ ಮಾಡಿದ ಅನೇಕ ಪ್ರಾಣಿ, ಪಕ್ಷಿಗಳನ್ನು ಇಲ್ಲಿ ಉದಾಹರಿಸಿದ್ದಾರೆ ಕತೆಗಾರ್ತಿ.

ಮಕ್ಕಳೆಲ್ಲರ ಅಚ್ಚುಮೆಚ್ಚಿನ ಬಾರ್ಬಿಡಾಲ್ ಕುರಿತಾದ ವಿಶೇಷ ಮಾಹಿತಿಗಳು ಇಲ್ಲಿವೆ. ಬಾರ್ಬಿ ಬೊಂಬೆಯ ಹುಟ್ಟು, ವೇಷಭೂಷಣಗಳು, ಕಾಲಕಾಲಕ್ಕೆ ಬಾರ್ಬಿ ಡಾಲ್‌ನಲ್ಲಿ ಆದ ಬದಲಾವಣೆಗಳು ಹೀಗೆ ಬಾರ್ಬಿ ಡಾಲ್‌ನ ಆಕರ್ಷಕ ವಿವರಗಳು ಮಕ್ಕಳ ಮನಗೆಲ್ಲುವಂತಿವೆ.

ಹೀಗೆ ವೈವಿಧ್ಯಮಯ ವಿಷಯಗಳನ್ನೊಳಗೊಂಡ ಈ ಕಥಾ ಸಂಕಲನವು ಸರಳ ಸುಂದರ ಭಾಷೆಯಲ್ಲಿ ಅಚ್ಚುಕಟ್ಟಾಗಿ ಮೂಡಿಬಂದಿದೆ. ಅಬಾಲವೃದ್ಧರಾದಿಯಾಗಿ ಎಲ್ಲರೂ ಓದಬಹುದಾದ, ಓದಬೇಕಾದ ಇಂತಹ ಅಪರೂಪದ ಕೃತಿಯನ್ನು ಪ್ರಕಟಿಸುತ್ತಿರುವುದಕ್ಕೆ ಸರೋಜಾ ಶ್ರೀನಾಥ್ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

‘ಅಮರ ರಾಮಾಯಣ’, ‘ಜಗದಗಲ ಕುತೂಹಲ’ ಹಾಗೂ ‘ಸಂಗೀತ ಸಾಹಿತ್ಯ ಅನುಸಂಧಾನ’ ಕೃತಿಗಳ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದಿರುವ ಸರೋಜಾ ಶ್ರೀನಾಥ್ ಅವರು ಈ ಕಥಾ ಸಂಕಲನದ ಮೂಲಕ ಮಕ್ಕಳ ಹಾಗೂ ಹಿರಿಯರ ಮನಸೂರೆಗೊಳ್ಳುವುದರಲ್ಲಿ ಯಾವುದೇ ಸಂಶಯವಿಲ್ಲ. ❍

---

*PAGE DONATED BY : **SHRI ROKESH HEGDE & FAMILY, DAHISAR***

# A Tribute to a Great Guru  Prof. G. V. Bhat

✍ **Dr. G. V. Joshi, Kekkar**

Prof G. V. Bhat Konkeri (87) a great Guru for thousands of students of Economics, the founder Principal of Divekar College of Commerce, Karwar , a Trustee of the Kanara Welfare Trust (KWT) of which no less a poet than Dr. Dinkar Desai was the founder-Chairman, an educationist to the core and man with noble qualities exhibited as a Rotarian, passed away on December 31, 2022.

No doubt, history made him what he was, mainly through the inexorable march of progress. It is equally true that he made a new history in Uttara Kannada with his extraordinary capacity to remember and untiring energy and also by enriching what may be appropriately called Institutional Economics. As Udayavani, a popular Kannada daily, rightly highlighted on January 3, 2023, Uttara Kannada district will continue to remember him for his outstanding contribution in the arena of higher education. Unsurprisingly, we are reminded of an appealing observation almost amounting to a call of social significance: "Measure your worth by what you leave behind, as a legacy into the lives of others".

Prof Bhat inherited his qualities of sharpness of intellect , leadership and hospitality from his father Vishnu Bhat hailing from the big village Kadatoka in Uttara Kannada. The qualities of magnanimity and deep concern for others were borrowed by him from his mother Saraswati. He remained a son of Goddess Saraswati like his elder brother Justice N.D.V. Bhat who was a judge in the High Court of Karnataka. Prof Bhat is survived by his wife Anasuya G. Bhat ( Anasuyakka for the present author) with her virtues of humility, capacity to manage household, generosity and dedication, has the credit of safeguarding the interests of her husband in all possible ways. His brilliant daughter Amita S. Bhagwat, the editor of Havyaka Sandesha, never failed to keep her father in good spirits despite her stay in a distant metrapolitan city of Mumbai and her husband Shivkumar P. Bhagwat, an advocate of flourishing practice and President of Havyaka Welfare Trust, Mumbai cooperated with her. His elder son Vishnu who was the senior vice president and global head of technology, Infosys, is now the Chairman, Co- founder and Managing Director of Blue Neem Medical Devices Pvt. Ltd. Prof Bhat's younger son Vinayak is a senior Vice President, heading Asia Pacific region of Fact. Set Research system. As able sons of able father they made relentless efforts to keep him healthy and happy. Prof Bhat's daughters-in-law Vani and Sheela were serving their Mava sincerely. Konkeri is thus radiating a significant message by setting a model very much essential and relevant now for young Haviks in Uttara Kannada and elsewhere.



Prof R.S.Habbu, Prof Bhat's close colleague for nearly 22 years at Divekar College, in his article in Kannada published after the sad demise of the latter identified that he never allowed himself to be swept by unjust considerations of caste, religion, region and language while attending to the genuine tasks of education. So profound was his influence on the public of Karwar including many of his students that when he retired in October of 1993, it gave him a farewell imbued with spirits of honour and warmth of affection having hardly any parallel. It became instrumental in reminding the experience of a famous neo-classical British economist Alfred Marshall (1842-1924) frequently quoted with respect by Prof. Bhat while teaching. When Marshall, enjoying fame as humanist, was joining Cambridge College in 1885 his students in the previous institution in Bristol burst into tears. Explaining the reason for this emotional outburst, Marshall said that this was suggestive of the "sound mind "and "good heart" that he gave to each one of them. Prof Bhat's humanism was also exemplary. This benefited numerous students including the author of this article in various ways. Several students were shedding tears when he left for Konkeri after retirement as they had secured sound minds and good hearts, thanks to the enduring influence of their Guru.

We can get useful pieces of information in the article in Kannada by Prof Bhat published in the Silver Jubilee issue (1970-1995) of 'Dinkara', the annual miscellany of Divekar College. Prof. Bhat, then having reputation as the Head of the Department of Economics in the erstwhile M.E.S Arts and Science College, Sirsi, was invited by the Chairman of the KWT to head Divekar College in 1970. To put it in different words now, it was a right choice by a right person for a right cause which fact was subsequently substantiated by various milestones of progress near the Arabian Sea at Kodibag representing unfathomable depth of ever-growing knowledge adored by Prof Bhat. Many infrastructure facilities now seen in the premises of Divekar College are rightly attributed to the efforts put in by him. To quote the report titled Twenty-Five Years of Dedicated Service: 1970-71 to 1994-95 "The college was lucky to have a very dynamic, enthusiastic and experienced person Prof. G. V. Bhat as its Principal". The report further stated that the College was one of the best institutions of Karnataka University imparting commerce education.

*PAGE DONATED BY :* ***SHRI ANANT GANESH BHAT, BANDRA & FAMILY***

The munificence of conception and magnificence of construction of Divekar College with necessary facilities keeps on spreading the message that work becomes worship in the field of higher education only if there is competent leadership. This is what Prof Bhat as an academician provided for nearly twenty-three years and half in Karwar. It was not difficult for him to raise substantial donations from institutions and individuals with his planned programmes, absolutely honest efforts and specific projects to uplift students.

Divekar College with the initiative of Prof Bhat started the tradition of involving colleges, high schools and primary schools in various programmes such as elocution competitions and debates. The National Social Service (NSS) unit of the college played a significant role in improving the condition of the colony of fishermen near the college by opening primary school and also by providing roads and electricity. In doing so the NSS unit profusely enjoyed the confidence and cooperation of the concerned government departments. The original fishermen's colony thus emerged as 'Sarvodaya Nagara' serving as concrete evidence to the significance of the concept of welfare state taught by Prof Bhat to this author. He continued his practice of serving the society even after his retirement in Kadatoka by donating a big sum of Rs 5 lakhs for opening a computer centre in memory of his father to the composite junior college there. The efforts made by him to protect the interests of this junior college for maintaining academic standard as a Trustee are admired and appreciated by the local people.

